ಆ) ಇದು ಉದ್ಭವಿಸುವುದಿಲ್ಲ. ಆದಾಗ್ಯೂ, ವಾಹನ ಸಂಚಾರಕ್ಕೆ ರಸ್ತೆಯನ್ನು ನಿರ್ಮಿಸಲಾಗುತ್ತಿದೆ.

ಇ) ಇಲ್ಲ.

ಈ) ಈ ಪ್ರಸ್ತಾವನೆಯು ಕಾರ್ಯಸಾಧಕವಲ್ಲ.

ಉ) ಮೇಲಿನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ತೀತಾ ಜಲಾಶಯದ ಬಗ್ಗೆ

೧೬೭೩. ಶ್ರೀ ಸಿ. ಎಸ್. ಭಾಸ್ಕರಪ್ಪ (ಬೆಳ್ಳಾವಿ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತೀತಾ ಜಲಾಶಯದಿಂದ ಏರಿಯ ಹಿಂಭಾಗಕ್ಕೆ ನಿಂತಿರುವ ತೀತಾ ಗ್ರಾಮದ ಒಂದು ಭಾಗವನ್ನು ಸ್ಥಳಾಂತರಿಸಬೇಕೆಂದು ಜಿಲ್ಲಾ ಆರೋಗ್ಯಾಧಿಕಾರಿಯವರು, ತುಮಕೂರು ಜಿಲ್ಲಾಧಿಕಾರಿಗಳು, ನಿರ್ಣಯ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ಆ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೆ ,

ಇ) ಹಾಗಿಲ್ಲದಿದ್ದಲ್ಲಿ, ಅಲ್ಲಿನ ನಿವಾಸಿಗಳಿಗೆ ಪರಿಹಾರ ಹಾಗೂ ಪುನರ್ವಸತಿಯನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದೇ, ಹಾಗಿದ್ದಲ್ಲಿ ಪರಿಹಾರ ಯಾವಾಗ ಕೊಡಲಾಗುವುದು ?

ಶ್ರೀ ಹೆಚ್. ಡಿ. ದೇವೆಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬಂದಿದೆ, ತೀತಾ ಗ್ರಾಮದಲ್ಲಿ ಕೇವಲ ಮೂರು ಮನೆಗಳನ್ನು ಮಾತ್ರ ಸ್ಥಳಾಂತರ ಗೊಳಿಸಲು ನಿರ್ಣಯ ತೆಗೆದುಕೊಳ್ಳಲಾಗಿದೆ.

ಆ) ಮತ್ತು ಇ) | ಎರಡು ಮನೆಗಳಿಗೆ ಪರಿಹಾರವನ್ನು ಕೊಟ್ಟಿದೆ ಮತ್ತು ಉಳಿದ ಒಂದು ಮನೆಗೆ ಪರಿಹಾರ ಕೊಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸ್ಥಳಾಂತರಗೊಳಿಸಬೇಕೆಂದು ನಿರ್ಣಯವಾಗಿರುವ ಮೂರು ಮನೆಗಳನ್ನು ಆಗಲೇ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.

ತೀತಾ ಜಲಾಶಯದ ಮುಳುಗಡೆ ಜಮೀನುಗಳಿಗೆ ಪರಿಹಾರ ನೀಡುವ ಬಗ್ಗೆ

೧೬೭೪. ಶ್ರೀ ಸಿ.ಎನ್. ಭಾಸ್ಕರಪ್ಪ,(ಬೆಳ್ಳಾವಿ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಕೊರಟಗೆರೆ ತಾಲ್ಲೂಕು ತೀತಾ ಜಲಾಶಯದ ಮುಳುಗಡೆ ಜಮೀನುಗಳಿಗೆ ಇನ್ನೂ ಪರಿಹಾರ ಹಣ ಪಾವತಿಯಾಗಿಲ್ಲದಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ಹಾಗೂ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಹೆಚ್ ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೇವಲ ಕೆಲವೇ ಜಮೀನುಗಳಿಗೆ ಮಾತ್ರ ಪರಿಹಾರವನ್ನು ಕೊಡಬೇಕಾಗಿದೆ.

ಆ) ಭೂಸ್ವಾಧೀನ ಕಾಯಿದೆ ಪ್ರಕಾರ ಅನುಸರಿಸಬೇಕಾದ ವಿಧಾನಗಳಿಂದ ವಿಳಂಬವಾಗಿದೆ.